ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಜಿ. ಪಾಟೀಲ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 987

ಉತ್ತರಿಸಬೇಕಾದ ದಿನಾಂಕ : 21.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಾಲ ಕೋರಿ ಎಷ್ಟು ರೈತರು ಅರ್ಜಿ ಸಲ್ಲಿಸಿದ್ದಾರೆ; (ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ 94395 ಹಾಗೂ ಯಾದಗಿರಿ ಜಿಲ್ಲೆಯಲ್ಲಿ 41,066 ಒಟ್ಟು 135461 ರೈತರು ನಿವ್ವಳ ಶೂನ್ಯ ಬಡ್ಡಿದರದ ಬೆಳೆಸಾಲ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.</td></tr>
<tr><td>ಆ)</td><td>ಮೇಲ್ಕಂಡ ಜಿಲ್ಲೆಗಳಲ್ಲಿ ಎಷ್ಟು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ ಮತ್ತು ಒಬ್ಬ ರೈತನಿಗೆ ಎಷ್ಟು ಸಾಲ ನೀಡಲಾಗುವುದು; (ವಿವರ ನೀಡುವುದು)</td><td>ಈ ಜಿಲ್ಲೆಗಳಲ್ಲಿ ದಿನಾಂಕ:30.11.2021 ಕ್ಕೆ ಇದ್ದಂತೆ ಬೆಳೆಸಾಲದ ಹೊರಬಾಕಿ ವಿವರ ಈ ಕೆಳಗಿನಂತಿದೆ.
<table>
<tr><th rowspan="2">ಕ್ರ. ಸಂ</th><th rowspan="2">ಜಿಲ್ಲೆಯ ಹೆಸರು</th><th colspan="2">ಬೆಳೆ ಸಾಲ</th></tr>
<tr><th>ಸಂಖ್ಯೆ</th><th>ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1</td><td>ಕಲಬುರಗಿ</td><td>94395</td><td>30694.38</td></tr>
<tr><td>2</td><td>ಯಾದಗಿರಿ</td><td>41066</td><td>13219.46</td></tr>
<tr><td></td><td>ಒಟ್ಟು</td><td>1,35,461</td><td>43,913.84</td></tr>
</table>
ಒಬ್ಬ ರೈತರಿಗೆ ಕನಿಷ್ಠ ರೂ.25,000/- ಹಾಗೂ ಗರಿಷ್ಠ ರೂ.3,00,000/- ದವರೆಗೆ ಬೆಳೆಸಾಲ ನೀಡಲಾಗುತ್ತಿದೆ.</td></tr>
<tr><td>ಇ)</td><td>ಇನ್ನೂ ಎಷ್ಟು ಅರ್ಹ ರೈತರಿಗೆ ಸಾಲ ನೀಡಬೇಕಾಗಿದೆ; (ವಿವರ ನೀಡುವುದು)</td><td>ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ಸಾಲ ವಿತರಿಸಲಾಗಿದೆ. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ 1,33,333 ರೈತರಿಗೆ ರೂ.400.00 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿದ್ದು, ದಿ:30.11.2021 ರವರೆಗೆ 1,35,461 ರೈತರು ಸಾಲವನ್ನು ಪಡೆದು ಹೊರಬಾಕಿ ಹೊಂದಿರುತ್ತಾರೆ. ಈ ಪೈಕಿ 58,598 ರೈತರಿಗೆ ಹೊಸದಾಗಿ ಸಾಲ ವಿತರಿಸಲಾಗಿದೆ.</td></tr>
</table>

ಈ)	ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು)	**ರೂ. 3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಮತ್ತು ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳವಾಗಿ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದ ಸಾಲದ ಯೋಜನೆಗೆ ಈ ಕೆಳಕಂಡ ಅರ್ಹತೆ ಮತ್ತು ಮಾನದಂಡಗಳು ಇರುತ್ತವೆ.** • ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ನಾಮ ಮಾತ್ರ ಸದಸ್ಯತ್ವ ಹೊಂದಿರತಕ್ಕದ್ದು. • ರೈತರು ಪಹಣಿ ಮತ್ತು ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು. • ರೈತನು ವಾಸವಿರುವ ಸಂಘ ಅಥವಾ ಭೂಮಿ ಹೊಂದಿರುವ ಸಂಘ ಯಾವುದಾದರೂ ಒಂದು ಸಂಘದ ವ್ಯಾಪ್ತಿಯಲ್ಲಿ ಮಾತ್ರ ಸಾಲ ಪಡೆಯತಕ್ಕದ್ದು. • ಸದರಿ ಆರ್‌ಟಿಸಿ ಮೇಲೆ ಇತರೇ ಬ್ಯಾಂಕುಗಳಲ್ಲಿ ಬೆಳೆ ಸಾಲ ಪಡೆದಿರಬಾರದು. • ಈ ಯೋಜನೆಯು ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳ ಸಾಲಕ್ಕಾಗಿ ಗರಿಷ್ಠ ರೂ.2.00 ಲಕ್ಷಗಳಿಗೆ ಹಾಗೂ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳದ ಸಾಲ ಒಟ್ಟು ಗೂಡಿಸಿ ರೂ.3.00 ಲಕ್ಷಗಳಿಗೆ ಮಾತ್ರ ಅನ್ವಯವಾಗುತ್ತದೆ. • ಬಡ್ಡಿ ಸಹಾಯದನ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್‌ಗೆ ಮಾತ್ರ ಲಭಿಸುತ್ತದೆ. • ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮರುಪಾವತಿಸಬೇಕು. • ರೈತನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರಬೇಕು.

ಸಂಖ್ಯೆ: ಸಿಒ 384 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು